16

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನ ಮಂತ್ರಿಯವರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 24/06/2020

# ಮೋದಿ ನಾಯಕತ್ವಕ್ಕೆ ದೇಶವ್ಯಾಪಿ ಜೈಕಾರ

ವಿಜಯ. 24.06.2020

## ಚೀನಾ ತಂಟೆಗೆ ಭಾರತ ಎದಿರೇಟು

### ಎನ್‌ಡಿಎ ಸರ್ಕಾರಕ್ಕೆ ಶೇ.73.6 ಜನ ಬೆಂಬಲ

ನವದೆಹಲಿ: ಭಾರತಕ್ಕೆ ಪಾಕಿಸ್ತಾನಕ್ಕಿಂತ ಚೀನಾ ಅತ್ಯಂತ ದೊಡ್ಡ ಶತ್ರುದೇಶವಾಗಿದೆ. ಉದ್ಧಟ ಚೀನಾದ ಅಪಾಯವನ್ನು ಮಟ್ಟಹಾಕಲು ನರೇಂದ್ರ ಮೋದಿ ಅತ್ಯಂತ ಸಮರ್ಥ ನಾಯಕರಾಗಿದ್ದಾರೆ. ಮೋದಿ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರ ಲಡಾಖ್ ಗಡಿಯಲ್ಲಿನ ಆತಂಕಕಾರಿ ಪರಿಸ್ಥಿತಿಯನ್ನು ಅತ್ಯಂತ ಯೋಗ್ಯ ರೀತಿಯಲ್ಲಿ ನಿರ್ವಹಿಸಿದೆ ಎಂದು ದೇಶವ್ಯಾಪಿ ಸಮೀಕ್ಷೆಯೊಂದರಲ್ಲಿ ಶೇ. 73.6 ಜನರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಚೀನಾದೊಂದಿಗೆ ಗಡಿ ಸಂಘರ್ಷ ಹೆಚ್ಚುತ್ತಿರುವ ಸಂದರ್ಭದಲ್ಲೇ ಸಿ-ವೋಟರ್ ನಡೆಸಿದ ಸಮೀಕ್ಷೆಯಲ್ಲಿ ಈ ಅಭಿಮತ ವ್ಯಕ್ತವಾಗಿದೆ. ಭಾರತಕ್ಕೆ ಚೀನಾವೇ ದೊಡ್ಡ ಸಮಸ್ಯೆಯೆಂದು ಶೇ. 68 ಜನರು ಹೇಳಿದರೆ, ಚೀನಾಕ್ಕೆ ಭಾರತ ಸೂಕ್ತ ಪ್ರತ್ಯುತ್ತರ ನೀಡಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದವರಲ್ಲಿ ಶೇ.39 ಮಂದಿ ಮಾತ್ರ ಹೌದೆಂದಿದ್ದಾರೆ. 61ಶೇ. ಜನ ಭಾರತ ಇನ್ನಷ್ಟು ಪ್ರಬಲವಾಗಿ ಸೇಡು ತೀರಿಸಿಕೊಳ್ಳಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

**» ಸಿ-ವೋಟರ್ ಸಮೀಕ್ಷೆ**

**ಪ್ರತಿಪಕ್ಷಕ್ಕೆ ಶೇ.16.7 ಬೆಂಬಲ:** ಸಮೀಕ್ಷೆಯಲ್ಲಿ ಎನ್‌ಡಿಎ ಸರ್ಕಾರಕ್ಕೆ ಹಾಗೂ ಪ್ರಧಾನಿ ಮೋದಿಗೆ ಶೇ. 73.6 ಜನರ ಬೆಂಬಲ ಸಿಕ್ಕರೆ ಶೇ. 16.7 ಮಂದಿ ಪ್ರತಿಪಕ್ಷಗಳಲ್ಲಿ ನಂಬಿಕೆಯಿಟ್ಟಿದ್ದಾರೆ. ಚೀನಾದೊಂದಿಗಿನ ವಿವಾದ ಇತ್ಯರ್ಥಕ್ಕೆ ಕೇಂದ್ರ ಸರ್ಕಾರಕ್ಕಾಗಲಿ ಪ್ರತಿಪಕ್ಷಗಳಿಗಾಲಿ ಸಾಮರ್ಥ್ಯವಿಲ್ಲ ಎಂದು ಶೇ. 9.6 ಜನರು ಅಭಿಪ್ರಾಯವಾಗಿದೆ.

ಶೇ.61 ಜನರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರಲ್ಲಿ ನಂಬಿಕೆಯಿಲ್ಲ ಎಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರಲ್ಲಿ ಹೆಚ್ಚಿನ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ರಾಷ್ಟ್ರೀಯ ಭದ್ರತೆ ವಿಚಾರದಲ್ಲಿ ಶೇ.72.6 ಜನರು ಮೋದಿಯವರಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದರೆ, ರಾಹುಲ್ ಗಾಂಧಿ ಮೇಲೆ ಸ್ವಲ್ಪ ನಂಬಿಕೆಯಿದೆಯೆಂದು ಶೇ.14.4 ಜನರು ಹೇಳಿರುವುದಾಗಿ ವರದಿ ತಿಳಿಸಿದೆ. ○ ಪುಟ 8

**ರಷ್ಯಾದಲ್ಲಿ ರಾಜನಾಥ್ ○8**



### ಸೇನೆ ವಾಪಸ್‌ಗೆ ಭಾರತ ಚೀನಾ ಜಂಟಿ ಸಮ್ಮತಿ

ಪೂರ್ವ ಲಡಾಖ್‌ನ ಗಲ್ವಾನ್ ಕಣಿವೆಯಲ್ಲಿ ಕವಿದಿರುವ ಯುದ್ಧ ಕಾರ್ಮೋಡವನ್ನು ಸರಿಸಿ ಗಡಿಯಲ್ಲಿ ಶಾಂತಿ ಸ್ಥಾಪಿಸುವ ಉದ್ದೇಶದಿಂದ ವಾಸ್ತವ ಗಡಿ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ನಿಯೋಜನೆಗೊಂಡಿರುವ ಸೇನೆಯನ್ನು ವಾಪಸ್ ಕರೆಸಿಕೊಳ್ಳಲು ಉಭಯ ರಾಷ್ಟಗಳು ಸಮ್ಮತಿಸಿವೆ. ಮಂಗಳವಾರ ನಡೆವ ಭಾರತ, ಚೀನಾ ಲೆಫ್ಟಿನೆಂಟ್ ಜನರಲ್ ಶ್ರೇಣಿಯ ಅಧಿಕಾರಿಗಳ ಸಭೆಯಲ್ಲಿ ಈ ನಿರ್ಧಾರಕ್ಕೆ ಬಂದಿರುವುದಾಗಿ ತಿಳಿದುಬಂದಿದೆ.

### ಡ್ರ್ಯಾಗನ್‌ಗೆ ತಿವಿದ ಭಾರತ

ಮಂಗಳವಾರ ನಡೆದ ರಷ್ಯಾ, ಭಾರತ ಮತ್ತು ಚೀನಾ ವಿದೇಶಾಂಗ ಸಚಿವರ ಸಭೆಯಲ್ಲೂ ಭಾರತ ಚೀನಾ ವಿರುದ್ಧ ವಾಗ್ದಾಳಿ ನಡೆಸಿದೆ. ವಿಶ್ವದ ಪ್ರಮುಖ ಧ್ವನಿಗಳು ಎಲ್ಲ ರೀತಿಯಲ್ಲೂ ಇನ್ನೊಬ್ಬರಿಗೆ ಮಾದರಿ ಆಗಬೇಕು, ಅಂತಾರಾಷ್ಟ್ರೀಯ ಕಾನೂನುಗಳನ್ನು ಗೌರವಿಸಬೇಕೆಂದು ಭಾರತದ ವಿದೇಶಾಂಗ ಸಚಿವ ಜೈಶಂಕರ್ ಚೀನಾವನ್ನು ನೇರವಾಗಿ ತರಾಟೆಗೆ ತೆಗೆದುಕೊಂಡರು. ಭಾರತ, ಚೀನಾ ಗಡಿ ವಿಚಾರದಲ್ಲಿ ರಷ್ಯಾ ತಲೆಹಾಕುವುದಿಲ್ಲ ಎಂದು ಆ ರಾಷ್ಟ್ರದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಸ್ಪಷ್ಟಪಡಿಸಿದ್ದಾರೆ.

### ಮೋದಿ ನಾಯಕತ್ವಕ್ಕೆ ದೇಶವ್ಯಾಪಿ ಜೈಕಾರ

ಮೊದಲನೇ ಪುಟದಿಂದ...

ರಾಷ್ಟ್ರೀಯ ಭದ್ರತೆ ವಿಚಾರದಲ್ಲಿ ಮೋದಿ ಅತ್ಯಂತ ನೆಚ್ಚಬಹುದಾದ ನಾಯಕ ಎಂದು ಶೇ. 89 ಜನ ವಿಶ್ವಾಸ ಪ್ರದರ್ಶಿಸಿದ್ದಾರೆ. ಭಾರತೀಯರು ಚೀನಿ ಉತ್ಪನ್ನ ಗಳನ್ನು ಬಹಿಷ್ಕರಿಸಬೇಕೆಂಬ ಆಶಯ ಸಮೀಕ್ಷೆಯಲ್ಲಿ ಭಾಗವಹಿಸಿದ ಶೇ. 68 ಜನರಿಂದ ವ್ಯಕ್ತವಾಗಿದೆ. ಸಮಸ್ಯೆ ಏನೇ ಇದ್ದರೂ ಭಾರತೀಯರು ಚೀನಿ ವಸ್ತುಗಳನ್ನು ಖರೀದಿಸುವುದನ್ನು ಮುಂದುವರಿಸುತ್ತಾರೆಂಬುದು ಶೇ. 31 ಜನರ ನಂಬಿಕೆಯಾಗಿದೆ.